and divergent viewpoints dissolve in the ultimate analysis in the sublime search for consensus, the meeting of minds of public representatives of different hues and complexion so that peaceful and harmonious democratic working is assured and public good is served. I have every hope that this laudable tradition of amity and mutual understanding will, invariably and in all circumstances, continue to receive your attention and your support.

ಸುವರ್ಣ ಕರ್ನಾಟಕದ ಆಚರಣೆಗಳು, ಆತ್ಮಶೋಧನೆ, ಆತ್ಮಾವಲೋಕನ ಮಾಡಿಕೊಳ್ಳಬೇಕಾದ, ಭೂತ-ಭವಿಷ್ಯತ್ತುಗಳನ್ನು ಅವಲೋಕಿಸ ಬೇಕಾದ ಪವಿತ್ರ ಸಂದರ್ಭವನ್ನು ಪ್ರತಿನಿಧಿಸುತ್ತವೆ. ಒಬ್ಬ ಅದಮ್ಯ ಆಶಾವಾದಿಯಾದ ಹಾಗೂ ಕರ್ನಾಟಕ ರಾಜ್ಯಕ್ಕೆ ಸೇವೆ ಸಲ್ಲಿಸುವ ಅವಕಾಶ ಹಾಗೂ ಗೌರವ ಪಡೆದಿರುವ ನಾನು ಈ ರಾಜ್ಯದ ಭವಿಷ್ಯ ಹಾಗೂ ನಿಯತಿಯ ಬಗ್ಗೆ ಅಚಲ ನಂಬಿಕೆ ಉಳ್ಳವನಾಗಿದ್ದೇನೆ. ಗತಕಾಲದ ಇದರ ಅದ್ಭುತ ಸಾಧನೆಗಳ ಅರಿವಿರುವ ಹಾಗೂ ವರ್ತಮಾನದ ಅದರ ಸಾಮರ್ಥ್ಯ ಅನಾವರಣಗೊಳ್ಳುತ್ತಿರುವುದನ್ನು ಕಾಣುತ್ತಿರುವ ನಾನು, ಈ ಆಚರಣೆಗಳನ್ನು, ಜನತೆಗೆ ವೈಭವಪೂರ್ಣ ಭವಿಷ್ಯತ್ತನ್ನು ಕಲ್ಪಿಸಲು ಶ್ರಮಿಸುವುದಕ್ಕಾಗಿ ನಮ್ಮ ಮುಂದಿನ ಪೀಳಿಗೆಯವರಿಗೆ ಇಂದು ನಾವೆಲ್ಲರು ನೀಡುತ್ತಿರುವ ಭರವಸೆ, ಆಶ್ವಾಸನೆ ಹಾಗೂ ವಹಿಸುತ್ತಿರುವ ಹೊಣೆ ಎಂಬುದಾಗಿ ಪರಿಭಾವಿಸುತ್ತೇನೆ. ಭಗವಂತನು ನಮ್ಮೆಲ್ಲರಿಗೂ ಒಳ್ಳೆಯದನ್ನು ಮಾಡಲಿ.

ಎಲ್ಲರಿಗೂ ನನ್ನ ನಮಸ್ಕಾರಗಳು.

ಜೈ ಭಾರತ / ಜೈ ಕರ್ನಾಟಕ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):-

ಬೆಳಗಾವಿಯಲ್ಲಿ ಜರುಗಿರುವ ಈ ಐತಿಹಾಸಿಕ ವಿಶೇಷ ಸಂಯುಕ್ತ ಅಧಿವೇಶನವನ್ನುದ್ದೇಶಿಸಿ ಭಾಷಣ ಮಾಡಿದ ಕರ್ನಾಟಕದ ಘನತೆವೆತ್ತ ರಾಜ್ಯಪಾಲರಾದ ಶ್ರೀ ಟಿ.ಎನ್. ಚತುರ್ವೇದಿ ಅವರಿಗೆ ರಾಜ್ಯ ಸರ್ಕಾರದ ಪರವಾಗಿ, ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಈ ಅಧಿವೇಶನ ಪಡೆಯಲು ಅನುವು ಮಾಡಿಕೊಟ್ಟ ವಿಧಾನ ಸಭೆಯ ಅಧ್ಯಕ್ಷರಾದ ಶ್ರೀ ಕೃಷ್ಣ ಅವರಿಗೂ ರಾಜ್ಯ ಸರ್ಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

ಹಾಗೆಯೇ ವಿಧಾನ ಪರಿಷತ್ತಿನ ಹಂಗಾಮಿ ಸಭಾಪತಿಗಳಾದ ಶ್ರೀ ಸಚ್ಚಿದಾನಂದ ಖೋತ್ ಅವರಿಗೂ ಕೂಡ ಈ ವಿಶೇಷ ಅಧಿವೇಶನ ನಡೆಯಲು ಅನುವು ಮಾಡಿಕೊಟ್ಟಿದ್ದಕ್ಕೆ ರಾಜ್ಯ ಸರ್ಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

ವಿಧಾನ ಸಭೆಯ ಉಪಾಧ್ಯಕ್ಷರಾದ ಶ್ರೀ ಎನ್.ವೈ.ಗೋಪಾಲಕೃಷ್ಣ ಅವರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಮೊಟ್ಟಮೊದಲಬಾರಿಗೆ ರಾಜಧಾನಿ ಬೆಂಗಳೂರಿನಿಂದ ಹೊರಗಡೆ ನಡೆದ ಈ ಐತಿಹಾಸಿಕ ಅಧಿವೇಶನದಲ್ಲಿ ಭಾಗವಹಿಸಿದ ಎಲ್ಲ ಶಾಸನಸಭಾ ಸದಸ್ಯರುಗಳಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಈ ಅಧಿವೇಶನ ನಡೆಯಲು ಬೆಳಗಾವಿಯ ಕೆ.ಎಲ್.ಇ. ಸೊಸೈಟಿಯ ಸಹಕಾರ ಮತ್ತು ಸಹಾಯ ಬಹು ದೊಡ್ಡಮಟ್ಟದ್ದು. ಅದಕ್ಕಾಗಿ ಕೆ.ಎಲ್.ಇ. ಸೊಸೈಟಿಯ ಅಧ್ಯಕ್ಷರಾದ ಶ್ರೀ ಪ್ರಭಾಕರ್ ಕೋರೆ ಅವರು ಮತ್ತು ಇತರ ಪದಾಧಿಕಾರಿಗಳಿಗೂ ಸರ್ಕಾರದ ಪರವಾಗಿ ವಂದನೆ ಮತ್ತು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ವಿಧಾನ ಮಂಡಲದ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿ ಹಾಗೂ ಕಂದಾಯ ಮತ್ತಿತರ ಪ್ರಮುಖ ಇಲಾಖೆಗಳ ರಾಜ್ಯಮಟ್ಟದ ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳು, ಬೆಳಗಾವಿ ಜಿಲ್ಲಾಧಿಕಾರಿ ಮತ್ತು ಅವರ ಸಿಬ್ಬಂದಿ, ಪೊಲೀಸ್ ಇಲಾಖೆ ಮತ್ತಿತರ ಎಲ್ಲಾ ಸರ್ಕಾರಿ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಕೂಡ ಈ ಅಧಿವೇಶನ ಯಶಸ್ವಿಯಾಗಲು ಸಕ್ರಿಯವಾಗಿ ಕೆಲಸ ಮಾಡಿ ಸಹಕರಿಸಿದ್ದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಖಂಡ ಕರ್ನಾಟಕ ಒಂದು. ಸಮಗ್ರ ಕರ್ನಾಟಕದ ಸಮತೋಲನದ ಅಭಿವೃದ್ಧಿಗೆ ಸರ್ಕಾರ ಶ್ರಮಿಸುತ್ತದೆ. ನಮ್ಮ ನೆಲ ಮತ್ತು ಜಲವನ್ನು ಸಂರಕ್ಷಿಸಿಕೊಂಡು ಭೌಗೋಳಿಕವಾಗಿ ಒಂದಾಗಿರುವ ಕರ್ನಾಟಕವನ್ನು ಮತ್ತು ಎಲ್ಲ ಕನ್ನಡಿಗರನ್ನು ಭಾವನಾತ್ಮಕವಾಗಿ ಬೆಸೆಯುವ ದಿಶೆಯಲ್ಲಿ ಈ ಅಧಿವೇಶನ ಒಂದು ವಿಶೇಷ ಹೆಜ್ಜೆಯಾಗಿದೆ.

ಈ ಸಂದೇಶ ಇಲ್ಲಿಂದ ಇಡೀ ನಾಡಿಗೆ ಹೋಗುವಂತೆ ಸಹಕರಿಸಿದ ಎಲ್ಲರೂ ವಿಶೇಷವಾಗಿ ಮಾಧ್ಯಮಗಳ ಸ್ನೇಹಿತರಿಗೂ ಜೊತೆಗೆ ಉತ್ಸಾಹದಿಂದ

ಹಬ್ಬದೋಪಾದಿಯಲ್ಲಿ ಬೆಳಗಾವಿಯನ್ನು ಶೃಂಗರಿಸಿ ಇಲ್ಲಿ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿದ ಮತ್ತು ಅಧಿವೇಶನದ ಯಶಸ್ಸಿಗೆ ಸಹಕರಿಸಿದ ಈ ಭಾಗದ ಮತ್ತು ಈ ನಗರದ ಎಲ್ಲ ಜನತೆಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಮಗ್ರ ಕರ್ನಾಟಕವನ್ನು ಸಶಕ್ತ ಕರ್ನಾಟಕವನ್ನಾಗಿ ರೂಪಿಸಲು ಪ್ರಾದೇಶಿಕ ಅಸಮತೋಲನ ನಿವಾರಿಸುವುದು ಅತ್ಯಗತ್ಯ ಎಂಬುದನ್ನು ನಮ್ಮ ಸರ್ಕಾರ ಮನಗಂಡು ಆ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ.

ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಪೂರಕವಾಗಿ ಡಾ॥ ಡಿ.ಎಂ. ನಂಜುಂಡಪ್ಪ ಅವರು ನೀಡಿರುವ ಶಿಫಾರಸ್ಸುಗಳನ್ನು ಜಾರಿಗೊಳಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂಬುದು ಈ ವಿಶೇಷ ಅಧಿವೇಶನದಲ್ಲಿ ಪ್ರತಿಧ್ವನಿಸಿದೆ.

ಬೆಳಗಾವಿ ನಗರ ಹಾಗೂ ಇಡೀ ಜಿಲ್ಲೆ ಸೇರಿ ಎಲ್ಲ ಗಡಿ ಪ್ರದೇಶಗಳ ಅಭಿವೃದ್ಧಿಗೆ ನಮ್ಮ ಸರ್ಕಾರ ಕೈಗೊಳ್ಳಲಿರುವ ಕಾರ್ಯಕ್ರಮಗಳ ಬಗ್ಗೆ ಈ ಅಧಿವೇಶನದಲ್ಲಿ ಈವರೆಗೆ ಸ್ಥೂಲವಾಗಿ ಚರ್ಚೆಯಾಗಿದ್ದು ನಾಳೆ ನಡೆಯುವ ಕಾರ್ಯಕಲಾಪಗಳ ವೇಳೆ ವಿವರವಾಗಿ ಚರ್ಚಿಸಿ ಉಚಿತ ನಿರ್ಧಾರಕ್ಕೆ ಬರಲಾಗುವುದು.

ಸುವರ್ಣ ಕರ್ನಾಟಕ ವರ್ಷದಲ್ಲಿ ಈ ಕುಂದಲ ನಾಡಿನಲ್ಲಿ ಜರುಗಿರುವ ವಿಶೇಷ ಅಧಿವೇಶನವನ್ನು ಚಿರಂತನ ಸ್ಮರಣೀಯ ಮತ್ತು ಅರ್ಥಪೂರ್ಣಗೊಳಿಸಲು ರಾಜ್ಯ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನಿಸಿದೆ ಮತ್ತು ಮುಂದೆಯೂ ಈ ದಿಶೆಯಲ್ಲಿ ಬದ್ಧತೆಯಿಂದ ಕಾರ್ಯೋನ್ಮುಖವಾಗಲಿದೆಯೆಂದು ರಾಜ್ಯ ಸರ್ಕಾರದ ಪರವಾಗಿ ಹೇಳಿ ಎಲ್ಲರಿಗೂ ಮತ್ತೊಮ್ಮೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಜೈ ಹಿಂದ್, ಜೈ ಕರ್ನಾಟಕ

(ರಾಷ್ಟ್ರಗೀತೆಯೊಂದಿಗೆ ಕರ್ನಾಟಕ ವಿಧಾನ ಮಂಡಲದ ಅಧಿವೇಶನದಲ್ಲಿ ಘನತೆವೆತ್ತ ರಾಜ್ಯಪಾಲರ ಭಾಷಣವು 12–34ಕ್ಕೆ ಮುಕ್ತಾಯಗೊಂಡಿತು)

* * * * *